ಓ. ಎಸ್ 421/2014
ಪಿ.ಡಬ್ಲ್ಯೂ- 1

**ದಿನಾಂಕಃ 05-03-2021 ರಂದು ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.**

**ಮುಂದುವರೆದ ಪಾಟೀಸವಾಲುಃ ಪ್ರತಿವಾದಿ-4 ಪರ ಶ್ರೀ.ಎಂ.ಎಸ್.ಎನ್.ವಕೀಲರಿಂದಃ**

ನಾನು ಬೈಚಾಪುರ ಗ್ರಾಮದಲ್ಲಿ ವಾಸಿಸುತ್ತಿದ್ದೇನೆ. ನನ್ನ ತಂದೆ ಚಲುವಯ್ಯನವರಿಗೆ 7 ಜನ ಮಕ್ಕಳು. ನಮ್ಮ ತಂದೆಗೆ ಸಂಬಂಧಿಸಿದಂತೆ 7 ಸ್ವತ್ತುಗಳು ಇರುತ್ತವೆ. ಸದರಿ 7 ಸ್ವತ್ತುಗಳಲ್ಲಿ ಕೆಲವೊಂದು ನನ್ನ ತಂದೆ ಹೆಸರಿನಲ್ಲಿ ಮತ್ತು ನನ್ನ ತಾತನ ಹೆಸರಿನಲ್ಲಿ ಇದೆ. ನಮ್ಮ ತಂದೆ ಹೆಸರಿನಲ್ಲಿ ಯಾವ ಯಾವ ಸ್ವತ್ತುಗಳು ಇದೆ ಎಂದು ಸರ್ವೆ ನಂಬರ್ ಹೇಳಲು ನನಗೆ ಗೊತ್ತಿಲ್ಲ. ನನ್ನ ತಾತನಿಗೆ 4 ಜನ ಮಕ್ಕಳು. ಸದರಿ 4 ಜನರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ಐಟಂ-2 ಸ್ವತ್ತಿನ ಸರ್ವೆ ನಂಬರ್ ನನಗೆ ಗೊತ್ತಿರುವುದಿಲ್ಲ. ಸದರಿ ಐಟಂ-2 ರ ಸ್ವತ್ತು ನನ್ನ ತಂದೆ ಹೆಸರಿನಲ್ಲಿ ಇದೆ. ಸದರಿ ಜಮೀನು ನಮ್ಮ ತಾತನ ಮೂಲಕ ನಮ್ಮ ತಂದೆಗೆ ಬಂದಿದೆ. ಐಟಂ-2 ರ ಸ್ವತ್ತನ್ನು ಮುದ್ದ ವೀರಯ್ಯನವರ ಮಗ ಸಿದ್ದಪ್ಪ ಎಂಬುವವರಿಗೆ 2 ಎಕರೆ, 26 ವರೆ ಗುಂಟೆ ಜಮೀನನ್ನು ದಿ.08-071965 ರಲ್ಲಿ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿಯನ್ನು ಭೋಗ್ಯ ಮಾಡಿದ್ದರು ಎನ್ನುತ್ತಾರೆ. ಸದರಿ ಸ್ವತ್ತನ್ನು ಒಟ್ಟು ಕುಟುಂಬದ ಪರವಾಗಿ ನನ್ನ ತಂದೆ ಮಾರಾಟ ಮಾಡಿದ್ದರು ಎಂದರೆ ಸರಿಯಲ್ಲ. ಸದರಿಯವರು ಭೋಗ್ಯ ಮಾಡಿರದೇ ಶುದ್ದ ಕ್ರಯಪತ್ರ ಬರೆದುಕೊಟ್ಟಿದ್ದರು ಎಂದರೆ ಸರಿಯಲ್ಲ. ಸದರಿ ಸಿದ್ದಪ್ಪನವರು ಭೋಗ್ಯದಾರರಾಗಿದ್ದಾರೆಂದು ಅವರನ್ನು ಪಕ್ಷಗಾರರನ್ನಾಗಿ ಸೇರಿಸಿಲ್ಲ ಎಂದರೆ ಸರಿ. ಸದರಿ ಸಿದ್ದಪ್ಪನವರ ಮರಣಾನಂತರ ಅವರ ಹೆಂಡತಿ ಭದ್ರಮ್ಮನವರು ದಿ.06-04-1984 ರಂದು ನರಸಮ್ಮ ಎಂಬುವವರಿಗೆ ನೋಂದಾಯಿತು ಕ್ರಯಪತ್ರದ ಮೂಲಕ ಮಾರಾಟ ಮಾಡಿದ್ದಾರೆಂದರೆ ಸರಿಯಲ್ಲ. ಸದರಿ ನರಸಮ್ಮನವರನ್ನು ಪಕ್ಷಗಾರರನ್ನಾಗಿ ಸೇರಿಸಿಲ್ಲ ಎಂದರೆ ಸರಿ. 1965 ರಲ್ಲಿ ಮಾರಾಟವಾದಾ ನಂತರ ಉಳಿಕೆ ಒಟ್ಟು ಸ್ವತ್ತಗಳನ್ನು 1980-81 ರಲ್ಲಿ ನನ್ನ ಅಣ್ಣ ತಮ್ಮಂದಿರು ವಿಭಾಗ ಮಾಡಿಕೊಂಡು ಸ್ವಾಧೀನಾನುಭವ ಹೊಂದಿದ್ದಾರೆಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಒಟ್ಟು ಕುಟುಂಬದಲ್ಲೆ ಇದ್ದು ಅವರುಗಳು ಏನು ಮಾಡಿಕೊಂಡಿದ್ದರೋ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಐಟಂ-2 ರ ಸ್ವತ್ತನ್ನು ನನ್ನ ತಂದೆಯು ಸಿದ್ದಪ್ಪನವರಿಗೆ ಮಾರಾಟದ ಮೂಲಕ ಸ್ವಾಧೀನ ನೀಡಿದ್ದು, ಅದರಂತೆ ಸದರಿ ಸ್ವಾಧೀನವನ್ನು ಸಿದ್ದಪ್ಪನವರ ಹೆಂಡತಿ ನರಸಮ್ಮನವರಿಗೆ ನೀಡಿದ್ದಾರೆಂದರೆ ಸರಿಯಲ್ಲ. ಐಟಂ-2 ರ 2 ಎಕರೆ 26 ಗುಂಟೆ ಜಮೀನಿನಲ್ಲಿ ನರಸಮ್ಮನವರು ಸ್ವಾಧೀನಾನುಭವ ಹೊಂದಿದ್ದಾರೆಂದರೆ ಸರಿಯಲ್ಲ. ದಿ. 29-04-1991 ರಂದು ಸದರಿ 2 ಎಕರೆ 26 ಗುಂಟೆ ಜಮೀನಿನಲ್ಲಿ 1 ಎಕರೆ 13 ಗುಂಟೆ ಜಮೀನನ್ನು ನನ್ನ ಸಹೋದರ ಕೆ. ಗೋವಿಂದಯ್ಯನವರು ಖರೀದಿ ಮಾಡಿದ್ದಾರೆಂದರೆ ಸರಿಯಲ್ಲ.

ಸಾಕ್ಷಿ ಮುಂದುವರೆದು ನಮ್ಮ ತಾತನ ಜಮೀನನ್ನು ನಾವೇ ಖರೀದಿಸಲು ಸಾಧ್ಯವೇ ಎನ್ನುತ್ತಾರೆ. ಸದರಿ ಸ್ವತ್ತನ್ನು ನೋಂದಣಿ ಕ್ರಯಪತ್ರದ ಮೂಲಕ ಸ್ವಯಾರ್ಜಿತವಾಗಿ ಖರೀದಿ ಮಾಡಿದ್ದಾರೆಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ಮೋಸವಾಗಿದೆ ಎನ್ನುತ್ತಾರೆ. ಸದರಿ ಕ್ರಯಪತ್ರದಂತೆ ಗೋವಿಂದಯ್ಯನವರಿಗೆ ಖಾತೆ ಆಗಿದೆ ಎಂದರೆ ಸಾಕ್ಷಿಯು ಮೋಸದಿಂದ ಮಾಡಲಾಗಿದೆ ಎನ್ನುತ್ತಾರೆ. ಸದರಿ ಗೋವಿಂದಯ್ಯನವರ ಮರಣಾನಂತರ ಮೃತ ಪ್ರತಿವಾದಿ-3 ಮತ್ತು 4 ರವರ ಹೆಸರಿನಲ್ಲಿ ಎಂ. ಆರ್ ನಂ. ಹೆಚ್ ನಂ. 36/2011-12 ರಂತೆ ಖಾತೆ ಆಗಿದೆ ಎಂದರೆ, ಸದರಿಯು ಮೋಸದಿಂದ ಮಾಡಲಾಗಿದೆ ಎನ್ನುತ್ತಾರೆ. ಸದರಿ ಖಾತೆಯು ಕಾನೂನಬದ್ಧವಾಗಿದೆ ಎಂದರೆ ಸರಿಯಲ್ಲ. ಸದರಿ ಖಾತೆ ಮೋಸದಿಂದ ಆಗಿದೆ ಎಂದು ನಾನು ಯಾವುದೇ ಅಪೀಲು ಸಲ್ಲಿಸಿಲ್ಲ. ಐಟಂ-2 ರ 1 ಎಕರೆ 13 ಗುಂಟೆ ಜಮೀನಿನಲ್ಲಿ ಪ್ರತಿವಾದಿ-4 ರವರು ಮಾಲೀಕತ್ವ ಮತ್ತು ಸ್ವಾಧೀನಾನುಭವ ಹೊಂದಿದ್ದಾರೆಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಎಲ್ಲರೂ ಸ್ವಾಧೀನಾನುಭವ ಹೊಂದಿದ್ದಾರೆ ಎನ್ನುತ್ತಾರೆ. ನಾನು ಹಾಜರುಪಡಿಸಿದ ಯಾವುದೇ ದಾಖಲೆಯೂ ಕೂಡ ನನ್ನ ತಂದೆ ಹೆಸರಿನಲ್ಲಿ ಇಲ್ಲ ಎಂದರೆ ಸರಿಯಲ್ಲ. ನಾನು ಒಟ್ಟು ಕುಟುಂಬದಲ್ಲಿ ಇಲ್ಲದೇ ಇದ್ದರೂ ಮತ್ತು ಈಗಾಗಲೇ ನನ್ನ ಅಣ್ಣ ತಮ್ಮಂದಿರ ನಡುವೆ ಭಾಗವಾಗಿದ್ದು, ಪ್ರತ್ಯೇಕವಾದ ನಂತರ 4 ನೇ ಪ್ರತಿವಾದಿಯ ತಂದೆ ಐಟಂ-2 ರ ಸ್ವತ್ತಿನಲ್ಲಿ 1 ಎಕರೆ 13 ಗುಂಟೆ ಜಮೀನನ್ನು ಖರೀದಿ ಮಾಡಿದ್ದರು ಎಂದರೆ ಸರಿಯಲ್ಲ. ಸದರಿ ಸ್ವತ್ತನ್ನು ನನ್ನ ತಂದೆಯು ಮಾರಾಟ ಮಾಡಿದ್ದರಿಂದ ಸದರಿ ಸ್ವತ್ತಿನಲ್ಲಿ ತಮ್ಮ ಕುಟುಂಬಕ್ಕೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಸದರಿ ಸ್ವತ್ತಿನಲ್ಲಿ ನನಗೆ ಯಾವುದೇ ಹಕ್ಕು ಇಲ್ಲದೇ ಇದ್ದರೂ ನಾನು ಸುಳ್ಳು ದಾವೆ ಹೂಡಿದ್ದೇನೆಂದರೆ ಸರಿಯಲ್ಲ. ಇಂದಿಗೂ ಕೂಡ ನಾವು ಒಟ್ಟು ಕುಟುಂಬದಲ್ಲಿ ಇರದೇ ಪ್ರತ್ಯೇಕವಾಗಿದ್ದೇವೆಂದರೆ ಸರಿಯಲ್ಲ. ಪ್ರತಿವಾದಿ-4 ರವರಿಗೆ ತೊಂದರೆ ಕೊಡಬೇಕೆಂದು ಐಟಂ-2 ರ ಸ್ವತ್ತನ್ನು ಸೇರಿಸಿ ದಾವೆ ಹೂಡಿದ್ದೇನೆಂದರೆ ಸರಿಯಲ್ಲ. ಸದರಿ ಸ್ವತ್ತಿನಲ್ಲಿ ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ-4 ರವರ ವಿರುದ್ದ ಸುಳ್ಳು ದಾವೆ ಹೂಡಿ ಸುಳ್ಳು ಪ್ರಮಾಣಪತ್ರ ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲಃ

(ಉಖ್ತ್ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒಪ್ಪಿದ್ದಾರೆ,

2ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು

ಜೆ.ಎಂ.ಎಫ್.ಸಿ., ಮಾಗಡಿ.